## 'ಮಂಗಳ'ವಾದ 'ಸುಧಾ'!

'ಪ್ರಜಾವಾಣಿ ಬಳಗ ಒಂದು ನೂತನ ವಾರ ಪತ್ರಿಕೆ ಹೊರತರುತ್ತಿದೆ, ಅದಕ್ಕೆ ಹೆಸರು ಸೂಚಿಸಿ, ಬಹುಮಾನ ಗಳಿಸಿ!' ಎಂದು ಓದುಗರಿಗೆ ಆಹ್ವಾನ ನೀಡಿದ ಜಾಹೀರಾತು ನನ್ನ ಕಣ್ಣಿಗೆ ಬಿತ್ತು. ಆಗ ನನಗಿನ್ನೂ 14 ವರ್ಷ. ನಾನು ಬಹುಮಾನ ಗಿಟ್ಟಿಸಲೇಬೇಕೆಂದು ತೀರ್ಮಾನಿಸಿ ನನ್ನ ಅಲ್ಪ ಸ್ವಲ್ಪ ಬುದ್ಧಿಯಿಂದ ಅನೇಕ ಹೆಸರುಗಳನ್ನು ಒಂದು ಹಾಳೆಯಲ್ಲಿ ಬರೆಯತೊಡಗಿದೆ. ಕಡೆಗೆ 'ಮಂಗಳ' ಎಂಬ ಹೆಸರನ್ನು ಸೂಚಿಸಿ ಪೋಸ್ಟ್‌ಕಾರ್ಡ್‌ನಲ್ಲಿ ಬರೆದು ಕಳಿಸಿದೆ. ಸ್ವಲ್ಪ ದಿನಗಳ ತರುವಾಯ 'ಸುಧಾ' ಎಂಬ ಹೆಸರನ್ನು ಆಯ್ಕೆ ಮಾಡಿ ಆ ಹೆಸರನ್ನು ಸೂಚಿಸಿದವರಿಗೆ ಬಹುಮಾನವನ್ನು ಘೋಷಿಸಲಾಯಿತು.

ಸೂಚಿಸಲಾದ ಇತರೆ ಹೆಸರುಗಳನ್ನೂ ಉಲ್ಲೇಖಿಸಿ, 'ಸುಧಾ' ಎಂಬ ಹೆಸರನ್ನು ಹೆಚ್ಚು ಸೂಕ್ತ ಎಂದು ಏಕೆ ಆಯ್ಕೆ ಮಾಡಲಾಯಿತು ಎಂಬ ವಿವರಗಳನ್ನು ಮೊದಲನೆಯ 'ಸುಧಾ' ವಾರಪತ್ರಿಕೆಯಲ್ಲಿ ವಿವರಿಸಿ ತಿಳಿಸಲಾಗಿತ್ತು. ಆ ವಿವರಗಳನ್ನು ಓದಿದ ನಂತರ ಬಹುಮಾನ ನನಗೆ ಸಿಗದೇ ಇದ್ದುದಕ್ಕೆ ಬೇಸರವಾಗಲಿಲ್ಲ. ಎರಡೇ ಅಕ್ಷರ, ಆದರೆ ಅರ್ಥಗರ್ಭಿತವಾದ 'ಸುಧಾ' ಹೆಸರು ಸೂಕ್ತ ಎಂದೂ ಅನಿಸಿತು.

ಇನ್ನು ವಾರಪತ್ರಿಕೆಯ ಚೊಚ್ಚಲ ಸಂಚಿಕೆಯ ಬರುವಿಕೆಯನ್ನೇ ಕಾತರದಿಂದ ಕಾಯುತ್ತಾ ಇದ್ದೆ. ಆ ದಿನಗಳಲ್ಲಿ ನಮ್ಮ ಅಜ್ಜಿಯ ಹಳ್ಳಿಯಲ್ಲಿ ಇದ್ದೆ. ದಿನಪತ್ರಿಕೆ ವಾರಪತ್ರಿಕೆ ಕೊಳ್ಳಲು ನಾಲ್ಕು ಮೈಲು ದೂರದ ಹಿರಿಯೂರು ಪಟ್ಟಣಕ್ಕೆ ಹೋಗಬೇಕಿತ್ತು.

ಆ ದಿನ ಬಂದೇ ಬಿಟ್ಟಿತು. ಮುಂಜಾನೆಯೇ ಬೇಗ ಎದ್ದು ಕಾಲು ನಡಿಗೆಯಿಂದಲೇ ಹಿರಿಯೂರು ಪಟ್ಟಣ ಸೇರಿದೆ. ಬಸ್ ಸ್ಟ್ಯಾಂಡ್ ಮುಂಭಾಗದ ಅಂಗಡಿಯಲ್ಲಿ ನನ್ನ ಬಹುನಿರೀಕ್ಷಿತ 'ಸುಧಾ' ತನ್ನ ತಿಳಿ ನೀಲಿ ಬಣ್ಣದ ಮುಖಪುಟದೊಂದಿಗೆ ಕಂಗೊಳಿಸುತ್ತಿತ್ತು. ಒಂದು ಪ್ರತಿಯನ್ನು ಕೊಂಡವನೇ ಬಸ್‌ಸ್ಟ್ಯಾಂಡ್‌ನಲ್ಲಿಯೇ ಬೆಂಚಿನ ಮೇಲೆ ಕುಳಿತು ಪೂರಾ ಓದಿ ಮುಗಿಸಿದೆ. ನಂತರ ಊರಿಗೆ ಮರಳಿದೆ. 'ಸುಧಾ'ಳೊಂದಿಗೆ ನನ್ನ ಸ್ನೇಹ ಆರು ದಶಕಗಳದ್ದು!

—ಲಕ್ಷ್ಮಣ್ ಗೊರ್ಲಕಟ್ಟೆ, ಮೈಸೂರು

## ಅಂದು, ಇಂದು, ಎಂದೆಂದೂ!

1965, ಜನವರಿ 11. ನಾನಾಗ 4ನೇ ತರಗತಿ. ನಮ್ಮ ಮನೆಗೆ 'ಸುಧಾ' ಎಂಬ ಹೊಸ ವಾರಪತ್ರಿಕೆಯನ್ನು ನಮ್ಮಪ್ಪ ತಂದುಕೊಟ್ಟಿದ್ದರು. ಆನಂತರ ಪ್ರತಿವಾರ ಮನೆಯಲ್ಲಿ ಎಲ್ಲರಿಗೂ 'ಸುಧಾ' ಬಂತೆಂದರೆ ಸಂಭ್ರಮ! ಬಾಲವಿಹಾರ, ನೀವು ಕೇಳಿದಿರಿ, ವಾರದ ವ್ಯಕ್ತಿ, ಸಮುದ್ರ ಮಥನ... ಹೀಗೆ ನಾವು ಓದುತ್ತಾ ಬೆಳೆದೆವು. 'ಚಿತ್ರಮಯ ಜ್ಞಾನಕೋಶ, ನೂರಾರು ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಧಾರಾವಾಹಿಗಳು, ಶೂಜ, ಡಾಬು, ಮಜನೂ, ಫ್ಯಾಂಟಮ್ ಕಾರ್ಟೂನ್ ಸರಣಿಗಳ ಸಂಗ್ರಹ ಇಂದಿಗೂ ನನ್ನ ಬಹು ದೊಡ್ಡ ಆಸ್ತಿ!

ಎಚ್ಚೆಸ್ಕೆ, ಜಿ.ಪಿ. ರಾಜರತ್ನಂ, ಅನುಪಮಾ ನಿರಂಜನ, ರಾಜಶೇಖರ ಭೂಸನೂರಮಠ, ಟಿ.ಕೆ. ರಾಮರಾವ್ ಹೀಗೆ ನೂರಾರು ಬರಹಗಾರರ ಪರಿಚಯವಾದದ್ದು 'ಸುಧಾ'ದಿಂದ! ರಾಮಮೂರ್ತಿ, ನಾಡಿಗ್, ಪ್ರಾಣ್ ಮುಂತಾದವರ ಕಾರ್ಟೂನ್‌ಗಳನ್ನು ನೋಡಿ ನಾನೂ ಬಿಡಿಸಲು ಕಲಿತೆ. ಪ್ರೌಢಶಾಲೆಗೆ ಬಂದಾಗ ಮೊದಲ ಲೇಖನ ಬರೆದೆ. ಅಲ್ಲಿಂದ ಅನೇಕ ಲೇಖನಗಳು ಸುಧಾ' ಪತ್ರಿಕೆಯಲ್ಲಿ ಪ್ರಕಟವಾದವು!

'ಅಣ್ಣಾ! ಸುಧಾ ಬಂತಾ?' ಎಂದು ಪ್ರತಿ ವಾರ ನಾವು ನಮ್ಮಪ್ಪನನ್ನು ಕೇಳುತ್ತಿದ್ದ ಪ್ರಶ್ನೆಯನ್ನು ಈಗ ನನ್ನನ್ನು ನನ್ನ ಮಕ್ಕಳು ಕೇಳುತ್ತಿದ್ದಾರೆ. ಬಾಲವಿಹಾರದಲ್ಲಿ ಪ್ರಕಟವಾದ ಕಥೆಗಳನ್ನು ಈಗ ಮೊಮ್ಮಕ್ಕಳಿಗೆ ಹೇಳಿಕೊಡುತ್ತಿದ್ದೇನೆ!

ಎಷ್ಟೋ ವಾರಪತ್ರಿಕೆಗಳು, ಮಾಸಪತ್ರಿಕೆಗಳು, ನಿಯತಕಾಲಿಕಗಳು ಬಂದಿವೆ, ಹೋಗಿವೆ. ಆದರೆ ನಿರಂತರವಾಗಿ 60 ವರ್ಷಗಳಿಂದ 'ಸುಧಾ', ನಮ್ಮ ಜ್ಞಾನಾರ್ಜನೆಯ, ಮನರಂಜನೆಯ ಹಾಗೂ ಮನೋವಿಕಾಸದ ಸಂಗಾತಿಯಾಗಿ ಮುಂದುವರೆದಿದೆ!

—ಡಾ. ಎಸ್.ವಿ. ನರಸಿಂಹನ್, ವಿರಾಜಪೇಟೆ

'ಸುಧಾ' ಜೊತೆಗಿನ ಓದುಗರ ಒಡನಾಟ

## 'ಸುಧಾ' ಬರುವಿಕೆಯ ಉತ್ಸಾಹ

ಅಂದು ಮಲೆನಾಡಿನ ಮೂಲೆಗೆ 'ಸುಧಾ' ಬರುವುದು ಕನಸಿನ ಮಾತು. ಆದರೂ, ನಾವು ಹೋಗುತ್ತಿದ್ದ ಮಿಡಲ್ ಸ್ಕೂಲ್ ಪೇಟೆಯಲ್ಲಿ ಇದ್ದು, ಅಲ್ಲೇ ಏಜೆಂಟರೊಬ್ಬರಿಂದ 'ಸುಧಾ' ತರಿಸುತ್ತಿದ್ದೆವು.

ಆದರೆ ಆ 'ಸುಧಾ' ಮನೆಗೆ ಬರುವಷ್ಟರಲ್ಲಿ ಹಿಂದಿನ, ಮುಂದಿನ ಪುಟಗಳು ಹರಿದು ಹೋಗಿರುತ್ತಿದ್ದುದೇ ಹೆಚ್ಚು. ಕಾರಣ, ನಾನೂ ನನ್ನ ತಮ್ಮ ನಾನು ಮೊದಲು, ತಾನು ಮೊದಲು ಓದಬೇಕೆಂದು ಜಗಳವಾಡಿ, ಪತ್ರಿಕೆಯನ್ನು ಎಳೆದಾಡಿ, ಹರಿದು ಹಾಕಿರುತ್ತಿದ್ದೆವು. ಅದಕ್ಕೂ ಕಾರಣವಿದೆ. 'ಸುಧಾ' ಬರುವಿಕೆಗಾಗಿ ನನ್ನ ಅಮ್ಮ, ದೊಡ್ಡಮ್ಮ ಕೂಡ ಕಾಯುತ್ತಿದ್ದರು.

'ಸುಧಾ'ದಲ್ಲಿ ಬರುತ್ತಿದ್ದ ಮಕ್ಕಳ ಕಥೆಗಳು, ಕವಿತೆಗಳು, ಗತಕಾಲಕ್ಕೊಂದು ಗವಾಕ್ಷಿ ಎಂಬ ಸ್ಥಿರ ಶೀರ್ಷಿಕೆಗಳು ನಮ್ಮನ್ನು ಆಕರ್ಷಿಸಿದರೆ, ಸಸ್ಯಶ್ಯಾಮಲಾ, ಮುಸುಕು ಧಾರಾವಾಹಿಗಳು ದೊಡ್ಡವರಿಗಾಗಿ ಇರುತ್ತಿತ್ತು ಎಂದು ನನ್ನ ಮಸುಕುಮಸುಕಾದ ನೆನಪು. 'ಸುಧಾ'ದಿಂದ ಶುರುವಾದ ನನ್ನ ಓದಿನ ಪಯಣ ಮುಂದೆ ನನ್ನದೇ ಆದ ಕಥಾ ಸಂಕಲನವನ್ನು ಹೊರತರುವಲ್ಲಿ ಸಫಲವಾಯಿತು. 'ಸುಧಾ'ಳಿಗೆ ಧನ್ಯವಾದ.

— ಜಲಜಾ ಗೋಪಾಲಕೃಷ್ಣ

## ಅರ್ಧ ಶತಮಾನದ ಗೆಳತಿ

ಹಿರೇಗುತ್ತಿಯಲ್ಲಿ ಪ್ರೌಢಶಾಲಾ ಶಿಕ್ಷಣ ಮುಗಿಸಿ ಅಂಕೋಲೆಯ ಜಿ.ಸಿ. ಕಾಲೇಜಿಗೆ ಪಿ.ಯು.ಸಿ.ಗೆ ಸೇರಿದಾಗ 'ಸುಧಾ'ಳನ್ನು ಪರಿಚಯಿಸಿದವರು ಅಂದು ಗ್ರಂಥಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದ ಸಾಹಿತಿ ದಿ. ಶ್ಯಾಮ್ ಹುದ್ದಾರ ಅವರು. ಪ್ರಥಮ ನೋಟದಲ್ಲಿ ಎಂದ ಹಾಗೆ, ಪ್ರಥಮ ಓದಿನಲ್ಲಿಯೇ 'ಸುಧಾ'ಳಿಗೆ ಆಕರ್ಷಿತನಾದೆ. ನನ್ನನ್ನು ಒಬ್ಬ ಲೇಖಕನಾಗಿ, ಕಥೆಗಾರನಾಗಿ ಮಾಡಿದ್ದು 'ಸುಧಾ'. ಅದಕ್ಕೇ ಅವಳಿಗೆ ಆಭಾರಿ, ಚಿರಋಣಿ! ಎಲ್ಲರಿಗೂ ಭಾನುವಾರ ಖುಷಿ ಕೊಟ್ಟರೆ, ನನಗೆ ಹೆಚ್ಚು ಖುಷಿ ಗುರುವಾರವೇ. ಕಾರಣ, 'ಸುಧಾ' ಅಂದು ತಪ್ಪದೇ ಮಾತು ಕಥೆಗೆ ಬರುವುದು. ಹೊಸ ಹೊಸ ವಿಚಾರ ಹೊತ್ತು ತರುತ್ತಾಳೆ. ಯುಗಾದಿಯಲ್ಲೋ, ದೀಪಾವಳಿಯಲ್ಲೋ ಮೈತುಂಬಿ ಹೊಸ ವಿನ್ಯಾಸದೊಂದಿಗೆ ಬಂದಾಗ ನೋಡುವುದೇ ಸೊಗಸು!

—ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ